ಕುಂದಾಪುರ ಸರ್ಕಾರಿ ಆಸ್ಪತ್ರೆಯಲ್ಲಿ ಅಗತ್ಯವಿಲ್ಲದ ಔಷಧಿಗಳು ಮತ್ತು ಉಪಕರಣಗಳು.

3050 (4109)

ಶ್ರೀ ಕೆ.ಪ್ರತಾಪಚಂದ್ರಶೆಟ್ಟಿ (ಕುಂದಾಪುರ): ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕುಂದಾಪುರ ಸರ್ಕಾರಿ ಆಸ್ಪತ್ರೆಯಲ್ಲಿ ಎಷ್ಟು ಅಗತ್ಯವಿಲ್ಲದ ಔಷಧಿಗಳು ಬಳಸಲಾಗದ ವೈದ್ಯಕೀಯ ಉಪಕರಣಗಳು ಹಾಗೂ ಇತರ ವೈದ್ಯಕೀಯ ಸಲಕರಣೆಗಳು ದಾಸ್ತಾನು ಇವೆ? (ಪೂರ್ಣ ವಿವರ ನೀಡುವುದು)

ಆ) ಬಳಸದಿರಲು ಕಾರಣಗಳೇನು?

ಡಾ. ಹೆಚ್.ಸಿ.ಮಹದೇವಪ್ಪ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು): ಅ) ಸಾರ್ವಜನಿಕ ಆಸ್ಪತ್ರೆ, ಕುಂದಾಪುರಕ್ಕೆ 1997-98ನೇ ಸಾಲಿನಲ್ಲಿ ಈ ಕೆಳಕಂಡ ಔಷಧಿ, ಸಾಧನ ಹಾಗೂ ಉಪಕರಣಗಳು ಸರಬರಾಜು ಆಗಿರುತ್ತವೆ:

1.	**ಔಷಧಿ**		**ರೂ.ಗಳು**
	1. ಸರ್ಕಾರಿ ಔಷಧಿ ಮಳಿಗೆ ಬೆಂಗಳೂರಿನಿಂದ	-	1,98,000-00
	2. ದಕ್ಷಿಣ ಕನ್ನಡ ಜಿಲ್ಲಾ ಪಂಚಾಯತ್‌ನಿಂದ	-	2,94,700-00
	ಒಟ್ಟು	-	**4,92,702-00**
2.	**ಸಾಧನ ಉಪಕರಣಗಳು** (ಜಿಲ್ಲಾಪಂಚಾಯತ್ ವತಿಯಿಂದ)		
	1. ತೆಂಗಿನ ನಾರಿನ ಹಾಸಿಗೆ	-	34
	2. ಗಾಯ ಪಟ್ಟಿ	-	200 ಥಾನ್
	3. ಬಿ.ಪಿ. ಆಪರೇಷನ್	-	2
	4. ಥರ್ಮಾಮೀಟರ್	-	10

5. ಬಿ.ಪಿ.ಬ್ಲೇಡ್ - 100

6. ಐ.ವಿ.ನೀಡ್ಲ್ಸ್ - 700

ಇದರ ಜೊತೆಗೆ ಕೆಹೆಚ್ಎಸ್ಡಿಪಿ ವತಿಯಿಂದ ಸಾಕಷ್ಟು ಉಪಕರಣಗಳು ಸರಬರಾಜಾಗಿವೆ.

ಆ) ಸಾರ್ವಜನಿಕ ಆಸ್ಪತ್ರೆ, ಕುಂದಾಪುರಕ್ಕೆ ಈ ಹಿಂದೆ ಸ್ವೀಕರಿಸಿದ ಅಗತ್ಯವಿಲ್ಲದ ಔಷಧಿಗಳನ್ನು ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಗಳು ಮಂಗಳೂರು ಅವರಿಗೆ ಬೇಕಾದ ಕಡೆ ಉಪಯೋಗಿಸಲು ಹಿಂದಿರುಗಿಸಲಾಗಿದೆ. ಉಪಯೋಗಕ್ಕೆ ಬಾರದ ಯಾವುದೇ ಔಷಧಿಗಳು ಇರುವುದಿಲ್ಲ.

ಕರ್ನಾಟಕ ಆರೋಗ್ಯ ಅಭಿವೃದ್ಧಿ ಯೋಜನೆಯಡಿಯಲ್ಲಿ ಸರಬರಾಜಾದ ಉಪಕರಣಗಳು ಕಟ್ಟಡ 2ನೇ ಹಂತವನ್ನು ತೆಗೆದಕೊಂಡ ಕಾರಣದಿಂದ ಉಪಯೋಗಿಸಲಾಗಲಿಲ್ಲ. ಕಟ್ಟಡವು ಪೂರ್ಣಗೊಂಡ ಮೇಲೆ ಈ ಉಪಕರಣಗಳನ್ನು ಸಾರ್ವಜನಿಕರ ಉಪಯೋಗಕ್ಕಾಗಿ ಬಳಸಬಹುದಾಗಿದೆ.

ವಿದ್ಯುತ್ಜನಕ (ಜನರೇಟರ್) ಅಳವಡಿಸುವ ಕಟ್ಟಡವು ಎರಡು ದಿನಗಳ ಹಿಂದೆ ವೈದ್ಯಾಧಿಕಾರಿಗಳಿಗೆ ಹಸ್ತಾಂತರಿಸಿರುವುದರಿಂದ 50 ಕೆವಿಎ ವಿದ್ಯುತ್ಜನಕವನ್ನು ಅಳವಡಿಸಲು ಕ್ರಮ ತೆಗೆದುಕೊಳ್ಳಲಾಗುವುದು.

ಕುಂದಾಪುರ ತಾಲ್ಲೂಕು ಶಂಕರನಾರಾಯಣ ಪ್ರಥಮ ದರ್ಜೆ ಕಾಲೇಜಿನಲ್ಲಿ ಕೊಠಡಿಗಳ ಕೊರತೆ.

3051 (4110)

ಶ್ರೀ ಕೆ.ಪ್ರತಾಪಚಂದ್ರಶೆಟ್ಟಿ (ಕುಂದಾಪುರ): ಮಾನ್ಯ ಉನ್ನತ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕುಂದಾಪುರ ತಾಲ್ಲೂಕು ಶಂಕರನಾರಾಯಣ ಪ್ರಥಮ ದರ್ಜೆ ಕಾಲೇಜಿನಲ್ಲಿ ಕೊಠಡಿಗಳ ಕೊರತೆಯಿಂದ ವಿದ್ಯಾರ್ಥಿ ವಿದ್ಯಾರ್ಥಿನಿಯರಿಗೆ ತೊಂದರೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಹಾಗಿದ್ದಲ್ಲಿ, ಕೊಠಡಿ ನಿರ್ಮಾಣದ ಮೂಲ ಅಂದಾಜು ಪಟ್ಟಿಗೆ ಅನುಗುಣವಾಗಿ ಅನುದಾನ ಬಿಡುಗಡೆ ಮಾಡದಿರಲು ಕಾರಣವೇನು?